ರಮಾನಂದ ಶರ್ಮಾ, ಬೆಂಗಳೂರು
ಮಂದಿರಾ ಬೇಡಿ ಸಾವಿರ ರೂಪಾಯಿ ಸೀರೆ ಸುತ್ಕೊಂಡವ್ಳೆ, ಐವತ್ತು ರೂಪಾಯಿ ರವಿಕೆಗೆ ಗತಿ ಇಲ್ಲ ಎಂದು ಇಲ್ಲೊಬ್ಬರು ಹಲುಬುವರಲ್ಲಾ...?



ಸೀರೆ ಪ್ರಾಯೋಜಕರದ್ದಂತೆ, ರವಿಕೆಗೆ ಯಾರೂ ಪ್ರಾಯೋಜಕರು ದೊರಕಿಲ್ಲವಂತೆ ಪಾಪ!

ಸೊಂ.ನಾ.ಶ್ರೀಧರಮೂರ್ತಿ, ದಾವಣಗೆರೆ
ಜೀವನವೆಂಬ ಜೂಜಿನಲ್ಲಿ ಗೆಲ್ಲುವ ಬಗ್ಗೆ ಸ್ವಲ್ಪ ಸುಳುಹು ನೀಡುತ್ತೀರಾ?
ಬಹಳ ಸುಲಭ! ಮಾವನೆಂಬ ಪಗಡೆಹಾಸಿಗೆ, ಪತ್ನಿಯೆಂಬ ದಾಳ ಉರುಳಿಸಿ, ಸ್ವಾರ್ಥವೆಂಬ ಕಾಯಿ ನಡೆಸಿಬಿಟ್ಟರಾಯ್ತು!

ಮಾಲತಿರಾಜು, ಬೆಂಗಳೂರು
ಹುಟ್ಟು ಸಾವಿನ ಸಂದರ್ಭದಲ್ಲಿ ಹನ್ನೆರಡು ದಿನಗಳ ಮೈಲಿಗೆಯ ಕಟ್ಟುಪಾಡೇಕೆ?
ಸೋಂಕಿನ ಭೀತಿಯಷ್ಟೆ. ಸತ್ತವರ ರೋಗ ಇತರರಿಗೂ, ಇತರರ ರೋಗ ಮಗುವಿಗೂ ಹರಡದಿರಲು ಈ ಬಂದೋಬಸ್ತು.

ಅಮರಯ್ಯ, ಶೋರಾಪೂರ
ಭಯೋತ್ಪಾದನೆಯ ಅಂತ್ಯ ಹೇಗೆ?



ನೆ ಅಕ್ಷರದಿಂದ.

ಕೆ.ಮಲ್ಲೇಶ, ಕೊಡಸೋಗೆ
ನಮ್ಮ ಜನತೆಯಲ್ಲಿ ಚಿಂತೆ ಜಾಸ್ತಿಯಾಗಿ, ಚಿಂತನೆ ಕಡಿಮೆಯಾಗಿದೆಯಲ್ಲಾ, ಏಕೆ?
ಚಿಂತನೆಗೆ ಅಧ್ಯಯನ, ಶ್ರಮ ಬೇಕು; ಚಿಂತೆ ಒಂದು ತೊಗೊಂಡ್ರೆ ನೂರಾರುಚಿತ.

ಆರ್.ವಿಜಯಲಕ್ಷ್ಮಿ, ಮಂಜುನಾಥನಗರ
ರಾಮರಾಜ್ಯ ಇಂದು ಮರೀಚಿಕೆಯಾಗಲು ಕಾರಣವೇನು?
ರಾಜಕಾರಣವೆಂಬ ಮಾಯಾಮೃಗ ಐಕ್ಯತೆಯೆಂಬ ರಾಮನನ್ನು ಭಿನ್ನತೆ ಎಂಬ ಕಾಡಿನಲ್ಲಿ ದಾರಿ ತಪ್ಪಿಸಿರುವುದೇ!

ವಿ. ಹಮೀದ್, ವಿಟ್ಲ
ಲವ್ ಮಾಡುವಾಗ ಇದ್ದ ಉತ್ಸಾಹ ಮದುವೆಯ ಬಳಿಕ ಇಲ್ಲದಿರಲು ಕಾರಣ?
ಲವ್ ಮಾಡುವಾಗ ಐಸ್ ಕ್ರೀಂ ಕೇಳುವ ಹುಡುಗಿ ಮದುವೆಯ ನಂತರ ಐ ಸ್ಕ್ರೀಮ್ ಎಂದು ಕೂಗುವುದರಿಂದ!

ಎಸ್.ಸಿ.ರಮೇಶ್, ಮೈಸೂರು
ಈ ದೇಶದಲ್ಲಿ ಮಾನವರೆಲ್ಲಾ ಒಂದೇ ಎಂಬ ತತ್ವವನ್ನು ಹೊಂದಿರುವವರು ಸಿಗುವುದೇ ವಿರಳವಲ್ಲಾ ಸಾರ್?
ಹಾಗೇನಿಲ್ಲ. ಬೇರೆಡೆ ಧಗಧಗ ಎಂದರೂ ಗದಗದಂತಹ ಜಾಗದಲ್ಲಿ ಇನ್ನೂ ಅಂತಹ ಭಾವದವರಿದ್ದಾರೆ.

ದೇಶವಳ್ಳಿ ಶಿವು, ಸಂತೇಮರಹಳ್ಳಿ
ಜಾಣನಿಗೆ ಮಾತಿನ ಏಟು, ದಡ್ಡನಿಗೆ ದೊಣ್ಣೆಯ ಏಟು, ಸೋಂಬೇರಿಗಳಿಗೆ?
ಪಾರ್ಲಿಮೆಂಟಿನಲ್ಲಿ ಒರಗುದಿಂಬಿರುವ ಸೀಟು!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
ರಾಜಕೀಯ ನಾಯಕರು ಉಚಿತವಾಗಿ ಕೊಡುವುದೇನು, ಪಡೆಯುವುದೇನು?
ನಿಂದೆ, ನಿದ್ರೆ.

ಶಾಂತಾಬಾಯಿ ಪೈ, ಕಾಸರಗೋಡ
ಬೊಕ್ಕತಲೆಯವರು ಬುದ್ಧಿವಂತರಂತೆ; ನಿಜವೇ ಸಾರ್?
ಏನೆಂದರೆ ಏನೂ ಅರ್ಥವಾಗದೆ ಹತಾಶೆಯಿಂದ ಕೂದಲು ಕಿತ್ತುಕೊಂಡವರೇ ಬೊಕ್ಕತಲೆಯವರಂತೇ......

ಕೆ.ಕೆ. ಜಯಚಂದ್ರಗುಪ್ತ, ಹಾಸನ
ಇದೀಗ ಹೊನ್ನು, ಮಣ್ಣುಗಳಿಗೆ ಅನ್ವಯಿಸುತ್ತಿರುವ ಅಕ್ರಮ-ಸಕ್ರಮ ಯೋಜನೆ ಹೆಣ್ಣುಗಳಿಗೂ ಅನ್ವಯಿಸಬಾರದೇ?
ಆಗುತ್ತಿದೆಯಲ್ಲಾ... ಲಿವಿಂಗ್ ಟುಗೆದರ್ ನಂತರದ ಮದುವೆ ಅದೇ!

ಡಿ.ಕೆ.ಶಿವಕುಮಾರ, ಮಂಡ್ಯ
ಹೆಣ್ಣೇ ಇಲ್ಲದ ಬದುಕು ಹೇಗಿರುತ್ತದೆ?
ಡಿಸೆಂಬರ್ ನಿಂದ ಜನವರಿಯವರೆಗಿನ ಅಯ್ಯಪ್ಪನ ಭಕ್ತರ ಬದುಕಿನಂತೆ.

## ಬಹುಮಾನಿತ ಪ್ರಶ್ನೆ

ಇಂದು, ಬೆಂಗಳೂರು
**Welfare** ಗೂ **farewell** ಗೂ ಏನು ವ್ಯತ್ಯಾಸ?
ವೆಲ್ ಫೇರ್ ಎಂದರೆ ಬಾವಿ ತೋಡಲಾಗುವ ಖರ್ಚು, ಆ ಬಾವಿಯಲ್ಲಿ ಬಿದ್ದರೆ ಫೇರ್‌ವೆಲ್!

ಬಸವರಾಜ ಹೊನಖಾಂಡೆ, ಅಥಣಿ
ಕೈಯಲ್ಲಿ ಏನಿದೆ?
ಹಿಡಿದರೆ ನಿರಾಳತೆ, ಕೊಟ್ಟರೆ ಕರಾಳತೆ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
ಸರ್ವೇ ಜನಾಃ ಸುಖೀನೋ ಭವಂತು ಸಂತರ ವಾಣಿ. ರಾಜಕಾರಣಿಗಳದು?
ಸರ್ವೇ ಜನಾಃ ಸುಖೀ **No** ಭವಂತು!

ಎಸ್.ಡಿ.ವೆಂಕಟಸುಬ್ಬು, ಮೈಸೂರು
ಸತ್ತವರ ಮೂಗಿಗೆ ಹತ್ತಿ ತುರುಕುವುದೇಕೆ?
ಎಲ್ಲಾ ಆಯಿತು, ಇನ್ನು ಮೇಲಕ್ಕೆ ಹತ್ತಿ ಎಂದು ಸೂಚಿಸಲಂತೆ!

ಕೆ.ಹೊನ್ನಪ್ಪ, ತುಮಕೂರು
ಹವಾನಿಯಂತ್ರಿತ ಕಾರಿನಲ್ಲಿ ಸೆಖೆ! ಇದು ಪ್ರಪಂಚದ ಎಷ್ಟನೆಯ ಅದ್ಭುತ?
ಅದ್ಭುತವೇನಲ್ಲ! ದುರ್ಯೋಧನನ ವಂಶದವರೇ ಹಾಗೆ. ನೀರು, ಶೀತ ಇದ್ದಲ್ಲಿ ಬೆವರುವುದು ಅವರ ಕುಲಧರ್ಮ!

ಜಾಕೋಬ್ ಡಿಸೋಜ, ಕುರುವಳ್ಳಿ
ಚಂದ್ರನಲ್ಲೂ ನೀರಿದೆಯಂತೆ! ಮುಂದೆ..?
ಸದ್ಯ! ಸೋಡಾದ ಖರ್ಚು ಉಳಿಯಿತು ಎಂದನೊಬ್ಬ ಕುಡುಕ.

ಎಂ.ಕೆ. ರವಿಕಾಂತ, ತುಮಕೂರು
ಪತ್ರಕರ್ತರೇ ಬೂಟು, ಚಪ್ಪಲಿಗಳನ್ನು ಗಣ್ಯಾತಿಗಣ್ಯರ ಮೇಲೆ ತೂರುವುದು ನ್ಯಾಯವೇ?



ಖಂಡಿತ ತಪ್ಪು. ಕಾಲನ್ನು ಕಾಯುವ ವಸ್ತುವನ್ನು ಕಾಲವನ್ನೇ ಕೆಡಿಸುವವರ ಮೇಲೆ ಎಸೆಯುವುದು ಪಾದರಕ್ಷೆಗೆ ಅವಮಾನ ಮಾಡಿದಂತೆಯೇ ಸೈ.

■ ರಾಮ್